ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1085
ಸದಸ್ಯರ ಹೆಸರು	ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	29.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರ
ಅ.	**ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ಹಾಗೂ ಬಡವರು ನಿರ್ಮಿಸಿರುವ ಮನೆಗಳಲ್ಲಿ ಜಲ್ಲಿ, ಮರಳು, ಕಲ್ಲು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:**	ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯ ಅಬಿವೃದ್ಧಿ ಕಾಮಗಾರಿಗಳಿಗೆ 2019-20 ಮತ್ತು 2020-21ನೇ ಸಾಲಿನ ಆಗಸ್ಟ್-2020ರ ಅಂತ್ಯದವರೆಗೆ ಈ ಕೆಳಕಂಡ ಪ್ರಮಾಣದ ಕಟ್ಟಡ ಕಲ್ಲು / ಜಲ್ಲಿ ಮತ್ತು ಮರಳು ಪೂರೈಕೆಯಾಗಿರುತ್ತದೆ.

ವರ್ಷ	ಪೂರೈಕೆಯಾದ ಕಟ್ಟಡ ಕಲ್ಲು / ಜಲ್ಲಿ ಪ್ರಮಾಣ (ಮೆ.ಟನ್ ಗಳಲ್ಲಿ)	ಪೂರೈಕೆಯಾದ ಎಂ-ಸ್ಯಾಂಡ್ ಪ್ರಮಾಣ (ಮೆ.ಟನ್ ಗಳಲ್ಲಿ)	ಪೂರೈಕೆಯಾದ ನೈಸರ್ಗಿಕ ಮರಳಿನ ಪ್ರಮಾಣ (ಮೆ.ಟನ್ ಗಳಲ್ಲಿ)
2019-20	**12,79,414**	**3,12,021**	**75,365**
2020-21 (ಆಗಸ್ಟ್-2020 ರ ಅಂತ್ಯದವರೆಗೆ)	**5,76,097**	**1,94,399**	**12,035**

		ಮುಂದುವರೆದು, ಚಿಕ್ಕಮಗಳೂರು ಜಿಲ್ಲೆಗೆ ನೆರೆ ಜಿಲ್ಲೆಗಳಾದ ದಕ್ಷಿಣ ಕನ್ನಡ, ಶಿವಮೊಗ್ಗ, ಹಾಸನ, ಚಿತ್ರದುರ್ಗ ಹಾಗೂ ಉಡುಪಿ ಜಿಲ್ಲೆಗಳಿಂದ ಎಂ-ಸ್ಯಾಂಡ್ ಹಾಗೂ ನದಿ ಮರಳು ಪೂರೈಕೆಯಾಗುತ್ತಿರುವುದರಿಂದ ಜಿಲ್ಲೆಯ ಅಬಿವೃದ್ಧಿ ಕಾಮಗಾರಿಗಳಿಗೆ ಕಟ್ಟಡ ಕಲ್ಲು /ಜಲ್ಲಿ ಹಾಗೂ ಮರಳಿನ ಸಮಸ್ಯೆ ಇರುವುದು ಕಂಡು ಬಂದಿರುವುದಿಲ್ಲ.
ಆ.	**ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು)**	ಚಿಕ್ಕಮಗಳೂರು ಜಿಲ್ಲೆಯ ಸರ್ಕಾರಿ ಹಾಗೂ ಸಾರ್ವಜನಿಕ ಕಾಮಗಾರಿಗಳಿಗೆ ಅಗತ್ಯಕ್ಕೆ ತಕ್ಕಂತೆ ಕಟ್ಟಡ ಕಲ್ಲು/ಜಲ್ಲಿ ಹಾಗೂ ಮರಳು ಪೂರೈಕೆಯಾಗುತ್ತಿರುತ್ತದೆ.
ಇ.	**ಮರಳು ಬದಲಾಗಿ ಎಂ-ಸ್ಯಾಂಡ್ ಉಪಯೋಗಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗಿದೆಯೆ ಕೈಗೊಂಡಿದ್ದಲ್ಲಿ. ವಿವರ ನೀಡುವುದು.**	ಕೈಗೊಳ್ಳಲಾಗಿರುತ್ತದೆ. ಸರ್ಕಾರವು ನದಿ ಮರಳಿಗೆ ಪರ್ಯಾಯವಾಗಿ ಎಂ-ಸ್ಯಾಂಡ್ ಉತ್ಪಾದನೆ ಮತ್ತು ಬಳಕೆಯನ್ನು ಪ್ರೋತ್ಸಾಹಿಸುತ್ತಿದ್ದು, ಈ ಕೆಳಗಿನಂತೆ ಕ್ರಮವಹಿಸಲಾಗಿರುತ್ತದೆ.

--2

		• ಕೆ.ಎಂ.ಎಂ.ಸಿ.ಆರ್ (ತಿದ್ದುಪಡಿ) ನಿಯಮಗಳು, 2016 ನಿಯಮ 15ರಂತೆ ಎಂ-ಸ್ಯಾಂಡ್ ಘಟಕ ಸ್ಥಾಪಿಸುವವರಿಗೆ ಗರಿಷ್ಠ 50-00 ಎಕರೆ ವಿಸ್ತೀರ್ಣದವರೆಗೆ ಕಲ್ಲುಗಣಿ ಗುತ್ತಿಗೆಯನ್ನು ಮಂಜೂರು ಮಾಡಲು ನಿಯಮಾವಳಿ ರೂಪಿಸಲಾಗಿದೆ. • ಕೆ.ಎಂ.ಎಂ.ಸಿ.ಆರ್ (ತಿದ್ದುಪಡಿ) ನಿಯಮಗಳು, 2016 ರ ನಿಯಮ 8A ರಂತೆ ಎಂ-ಸ್ಯಾಂಡ್ ತಯಾರಿಸುವ ಉದ್ದೇಶಕ್ಕಾಗಿ 30 ವರ್ಷಗಳ ಅವಧಿಗೆ ಕಲ್ಲುಗಣಿ ಗುತ್ತಿಗೆ ಮಂಜೂರು ಮಾಡಲು ನಿಯಮಾವಳಿ ರೂಪಿಸಲಾಗಿದೆ. • ಕೆ.ಎಂ.ಎಂ.ಸಿ.ಆರ್ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-Z ಎ ರಂತೆ ತಿದ್ದುಪಡಿ ನಿಯಮ-2016 ಜಾರಿಯಾಗುವ ಪೂರ್ವದಲ್ಲಿ ಕೆ.ಎಂ.ಎಂ.ಸಿ.ಆರ್, 1994ರ ನಿಯಮ 8(5)ರಂತೆ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರ ಸ್ವೀಕೃತವಾಗಿದ್ದಲ್ಲಿ ಅಂತಹ ಅರ್ಜಿಗಳ ಪ್ರದೇಶಗಳಲ್ಲಿ ತಿದ್ದುಪಡಿ ಪೂರ್ವ ಚಾಲ್ತಿಯಲ್ಲಿದ್ದ ನಿಯಮಾವಳಿಯಂತೆ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಿದೆ. • ಎಂ-ಸ್ಯಾಂಡ್ ಬಳಕೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಇಲಾಖೆಯಿಂದ ಆಕಾಶವಾಣಿ, ಬೆಂಗಳೂರು ರವರ ಮೂಲಕ ಜಿಂಗಲ್ಸ್‌ಗಳ ಪ್ರಸಾರ, ಸಂದರ್ಶನ ಕಾರ್ಯಕ್ರಮ, ಫೋನ್ ಇನ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ. ಇದಲ್ಲದೆ ಪೋಸ್ಟರ್ಸ್, ಕರಪತ್ರ, ಫ್ಲೆಕ್ಸ್ ಗಳನ್ನು ಮುದ್ರಿಸಿ ಎಂ-ಸ್ಯಾಂಡ್ ಉಪಯೋಗಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿರುತ್ತದೆ. • ಕೆ.ಎಂ.ಎಂ.ಸಿ.ಆರ್ (ತಿದ್ದುಪಡಿ) ನಿಯಮಗಳು, 2016 ರಲ್ಲಿ ನಿಯಮ 31-ZC ಎಂಬ ವಿಶೇಷ ನಿಯಮ ಜಾರಿಗೆ ತಂದು ದಿನಾಂಕ 12.08.2016 ರ ಪೂರ್ವದಲ್ಲಿ ಎಂ-ಸ್ಯಾಂಡ್ ತಯಾರಿಸಿ ಘಟಕದವರಿಗೆ ಎಂ-ಸ್ಯಾಂಡ್ ಉತ್ಪಾದನೆ ದ್ವಿಗುಣಗೊಳಿಸಲು ಹರಾಜು ರಹಿತವಾಗಿ ಕಲ್ಲುಗಣಿಗುತ್ತಿಗೆ ಮಂಜೂರಾತಿಗೆ ಕ್ರಮವಹಿಸಲಾಗಿರುತ್ತದೆ.

ಸಂಖ್ಯೆ: ಸಿಐ 486 ಎಂಎಂಎನ್ 2020

(ಸಿ.ಸಿ. ಪಾಟೀಲ)

ಗಣಿ ಮತ್ತು ಭೂವಿಜ್ಞಾನ ಸಚಿವರು

೧೧೪(೧೦೮೫)